ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಅಭಿಯಂತರವರ ಕಛೇರಿ, ರಾಜರಾಜೇಶ್ವರಿನಗರ ವಲಯ
18ನೇ ಕ್ರಾಸ್, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿನಗರ, ಬೆಂಗಳೂರು- 98

ಸಂಖ್ಯೆ.ಮು.ಅ/ರಾ.ರಾ.ನ.ವ/ಪಿಆರ್/26/A/2022-23 ದಿನಾಂಕ: 04/6/2022

ಪರಿವೀಕ್ಷಣಾ ವರದಿ

ವಿಷಯ:- **Comprehensive Development of Roads and Drains in ward no.16 Rajarajeshwari Nagara Assembly Constituency under Package 2019-20 RRN DIV (01) Annexure-2 Sl no.663 and 1949"** ಕಾಮಗಾರಿಯ ಪರಿವೀಕ್ಷಣಾ ವರದಿ ನೀಡುವ ಬಗ್ಗೆ.

* * * * *

ಹಾಜರಿದ್ದ ಅಧಿಕಾರಿಗಳು:

1. ಕಾರ್ಯಪಾಲಕ ಅಭಿಯಂತರರು ರಾ.ರಾ.ನಗರ ವಿಭಾಗ
2. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಾ.ರಾ.ನಗರ ಉಪವಿಭಾಗ
3. ಸಹಾಯಕ ಅಭಿಯಂತರರು, ವಾರ್ಡ್ ನಂ.16

ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ ವಾರ್ಡ್ ನಂ.16 ಜಾಲಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ 2021-22ನೇ ಸಾಲಿನ ಲೆಕ್ಕಶೀರ್ಷಿಕೆ ಪಿ-3744 ಅನುದಾನದಡಿಯಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಯಾದ **"Comprehensive Development of Roads and Drains in ward no.16 Rajarajeshwari Nagara Assembly Constituency under Package 2019-20 RRN DIV (01) Annexure-2 Sl no.663 and 1949"** (016-20-000018) ರಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ರೂ.1100.00 ಲಕ್ಷಗಳಿಗೆ 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರದಂತೆ ಅಂದಾಜು ಪಟ್ಟಿ ಮಂಜೂರಾಗಿದ್ದು, ಅದರಂತೆ ಟೆಂಡರ್ ಕರೆದು ಸದರಿ ಕಾಮಗಾರಿಯ ಕಾರ್ಯಾದೇಶ ಸಂಖ್ಯೆ:EE/RRND/Wo.No./000053/2020-21, Dt.13.07.2020 ರಂದು ಗುತ್ತಿಗೆದಾರರಾದ ಶ್ರೀ.ದಾಮೋದರ್ ಮಂಜುನಾಥ್ (ಕೆ.ದಾಮೋದರ್ & ಕೋ) ರವರಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ.

ಮುಂದುವರೆದು, ಸದರಿ ಕಾಮಗಾರಿಯ ಮೂಲ ಅಂದಾಜು ಪಟ್ಟಿಯಲ್ಲಿ ವಾರ್ಡ್ ಸಂಖ್ಯೆ16ರ ಜಾಲಹಳ್ಳಿ ಪ್ರದೇಶಗಳ ರಸ್ತೆ ಮತ್ತು ಚರಂಡಿ ನಿರ್ವಹಣೆ ಕಾಮಗಾರಿಗಳನ್ನು ನಿರ್ವಹಿಸಲು ಅವಕಾಶ ಮಾಡಿಕೊಂಡಿದ್ದು, ಅದರಂತೆ ಕಾಮಗಾರಿಯು ಪ್ರಗತಿಯಲ್ಲಿದ್ದಾಗ ಮಾನ್ಯ ತೋಟಗಾರಿಕೆ, ಯೋಜನೆ ಮತ್ತು ಸಾಂಖ್ಯಿಕ ಸಚಿವರು ಹಾಗೂ ಶಾಸಕರು ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ರವರು ಪ್ರಗತಿ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಸದರಿ ಕಾಮಗಾರಿಯ ಅಂದಾಜುಪಟ್ಟಿಯಲ್ಲಿ Road Studs ಮತ್ತು Road Marking ಗಳನ್ನು ಅಳವಡಿಸಲು ಅವಕಾಶ ಮಾಡಿಕೊಂಡಿರುವುದನ್ನು ಗಮನಿಸಿ ಅಂದಾಜು ಪಟ್ಟಿಯನ್ವಯ ವಾರ್ಡ್ ರಸ್ತೆಗಳನ್ನು ಅಭಿವೃದ್ಧಿಪಡಿಸುತ್ತಿರುವುದರಿಂದ ಈ ಸಣ್ಣ ರಸ್ತೆಗಳಿಗೆ Road Studs ಮತ್ತು Road Marking ಅಳವಡಿಸುವ ಬದಲು ಕಲ್ವರ್ಟ್‌ಗಳನ್ನು ದುರಸ್ಥಿಪಡಿಸುವ ಕಾಮಗಾರಿಯನ್ನು ನಿರ್ವಹಿಸಲು ಅಗತ್ಯ ಕ್ರಮ ವಹಿಸಲು ಮಾನ್ಯ ಸಚಿವರು ಸೂಚಿಸಿರುತ್ತಾರೆ.

ಪುಟ-೨...

Scanned with CamScanner

ಮಾನ್ಯ ಶಾಸಕರು, ಯಶವಂತಪುರ ವಿಧಾನಸಭಾ ಕ್ಷೇತ್ರ ರವರ ನಿರ್ದೇಶನದಂತೆ ವಾರ್ಡ್‌ನ ಸಹಾಯಕ ಅಭಿಯಂತರರೊಡನೆ ಮು.ಅ(ರಾ.ರಾ.ನಗರ) ಮತ್ತು ಕಾ.ಪಾ.ಅ(ರಾ.ರಾ.ನಗರ)/ಸ.ಕಾ.ಅ(ಯಶವಂತಪುರ) ರವರು ಕಾಮಗಾರಿ ಸ್ಥಳವನ್ನು ಪರಿಶೀಲಿಸಿ, ಸದರಿ ಕಾಮಗಾರಿಗೆ ಅನುಗುಣವಾಗಿ ಅಗತ್ಯವಿರುವ ಎಲ್ಲಾ ಅಂಶಗಳನ್ನು ಅಳವಡಿಸಿಕೊಂಡು ಹಾಗೂ ಟೆಂಡರ್ ನಿಯಮಾವಳಿ Clause 35 ರಂತೆ ದರಗಳನ್ನು ನಿಗಧಿಪಡಿಸಿ, ಈಗಾಗಲೇ ಅನುಮೋದನೆಯಾಗಿರುವ ಅಂದಾಜುಪಟ್ಟಿಯನ್ನು ಮಾರ್ಪಾಡು ಮಾಡಿಕೊಂಡು ಕಲ್ಜರ್ಪ್‌ಗಳನ್ನು ದುರಸ್ಥಿಪಡಿಸಲು ಬೇಕಾಗಿರುವ ಅಂಶಗಳನ್ನು ಸ್ಥಳದಲ್ಲಿನ ಅವಶ್ಯಕತೆ ಹಾಗೂ ಸಾರ್ವಜನಿಕರ ಉಪಯೋಗಕ್ಕಾಗಿ ಅನುಕೂಲವಾಗುವಂತೆ ಅವಶ್ಯವಿರುವ ಅಂಶಗಳನ್ನು ಅಳವಡಿಸಿಕೊಂಡು ಕೆಲವು ಮಾರ್ಪಾಡುಗಳೊಂದಿಗೆ ಮಾರ್ಪಾಡು ಅಂದಾಜು ಪಟ್ಟಿಯನ್ನು ಅನುಮೋದಿತ ಟೆಂಡರ್ ಮೊತ್ತದೊಳಗೆ ತಯಾರಿಸಿ ಅನುಮೋದನೆ ಪಡೆದುಕೊಳ್ಳಲು ಕಾರ್ಯಪಾಲಕ ಅಭಿಯಂತರರು (ರಾ.ರಾ.ನಗರ) ರವರಿಗೆ ಪರಿವೀಕ್ಷಣೆ ಸಮಯದಲ್ಲಿ ಸೂಚಿಸಲಾಯಿತು.

ಮುಖ್ಯ ಅಭಿಯಂತರರು
ರಾಜರಾಜೇಶ್ವರಿನಗರ ವಲಯ

ರವರಿಗೆ,
ಕಾರ್ಯಪಾಲಕ ಅಭಿಯಂತರರು
ರಾ.ರಾ.ನಗರ ವಿಭಾಗ

Scanned with CamScanner